ಪ್ರೀತಿಸುತ್ತೀನಿ. ನಾವು ಆದರ್ಶ ಸತಿಪತಿಗಳು ಸರ್. ನಾನೂ ನನ್ನ ಹೆಂಡತಿಯ ಪ್ರಾಣವನ್ನು ಯಮನೊಡನೆ ಫೈಟ್ ಮಾಡಿ ಹಿಂದಕ್ಕೆ ತಂದು ಲೋಕವನ್ನು ದಂಗುಬಡಿಸಬಲ್ಲೆ. ಆದರೆ, ಅದಕ್ಕೆ ಹೆಂಡತಿಯ ಡೆತ್ ಆಗಬೇಕಲ್ಲ ಸಾರ್ ಎಂದು ಅಳತೊಡಗಿದ.

ನಟಿ: ಅಬ್ಬ. ಎಂಥ ಅದ್ಭುತ ಗಂಡ! ಪವಾಡ ಸದೃಶ.

ನಟ: ಪ್ರಶ್ನೆಗೆ ಉತ್ತರಿಸಿ ಸರ್. ಟೈಮ್ ಆಗ್ತಾ ಇದೆ.

ಪತಿ ನಂಬರ್ 1: ಹೇಳ್ತೀನಿ. ಆದರೆ, ಕ್ಷಮಿಸಿ ಸರ್! ಪ್ರಶ್ನೆ ಮರೆತೇ ಹೋಗಿದೆ!

ನಟಿ: ದಿನವೂ ಆಫೀಸಿನಿಂದ ಮನೆಗೆ ಎಷ್ಟು ಹೊತ್ತಿಗೆ ಬರುತ್ತೀರಿ?

ಪತಿ ನಂಬರ್ 1: ದೇವ್ರಾಣೆ ಮೇಡಂ. ಯಾರ ಮಾತನ್ನೂ ಕೇಳ್ಬೇಡಿ. ಲಂಚಕೋರ ಅಂತಾರೆ. ಅದು ಬರೀ ಚಾಡಿ. ಆಫೀಸ್ ಬಿಟ್ಟ ಐದು ನಿಮಿಷದಲ್ಲಿ ಮನೇಲಿರ್ತೀನಿ. ನನಗೆ ಕ್ಲಬ್ಬು, ಬಾರು, ಪೋಕ್ರಿ ಫ್ರೆಂಡ್ಸ್ ಅಂತ ಗೊತ್ತೇ ಇಲ್ಲ. 50 ರೂಪಾಯಿ ಇದ್ರೆ ಖರ್ಚು ಮಾಡಲು ಗೊತ್ತಿಲ್ಲ.

ನಟಿ: ಅದ್ಭುತ! ನಿಮ್ಮಂಥ ಗಂಡ ಸಿಗಲು ಹೆಂಡತಿ ಪುಣ್ಯ ಮಾಡಿರಬೇಕು. ಆದರೆ, ವಾರಕ್ಕೊಮ್ಮೆಯಾದರೂ ಫ್ರೆಂಡ್ಸ್ ಜೊತೆ ತಿರುಗಾಟಕ್ಕೆ ಹೋಗಿ ಬನ್ನಿ. ಪಾರ್ಟಿ ಮಾಡಿ. ಮನಸ್ಸು ಹಗುರ ಆಗುತ್ತೆ. ಆರೋಗ್ಯಕ್ಕೆ ಒಳ್ಳೆಯದು.

ಪತಿ ನಂಬರ್ 1: ಹೌದು ಮೇಡಂ. ಎಲ್ಲ ಕೇಡಿನ ಮೂಲ ದುಡ್ಡು. ದುಡ್ಡು ಖರ್ಚಾಗಲಿ ಬಿಡಿ, ಕೆಟ್ಟದ್ದನ್ನು ಸುಟ್ಟಾಕೋಣ.

ನಟ: ಅಬ್ಬಾ! ಎಂಥಾ ಮಸ್ತ್ ಮಾತಾಡಿದ್ರಿ. ಈ ಮಾತಿಂದ ನೀವು ನಮ್ಮ ಮನಸ್ಸಲ್ಲಿ ಸ್ಥಾನ ಪಡೆದಿದ್ದೀರಿ.

ನಟಿ : ಮನೇಲಿ ಯಾವ ಕಾರಿದೆ?

ಪತಿ ನಂಬರ್ 1: ಮೊದಲು 'ವ್ಯಾನಿಟಿ' ಇತ್ತು. ಅದನ್ನು ಮಾರಿ ಒಂದು ವಾರದ ಕೆಳಗೆ ರ್‍ಯಾಪಿಡಿಟಿ' ಕಾರು ತಗೊಂಡೆ. (ಮದುವೆಯಾಗಿ 10 ವರ್ಷವಾದರೂ ಅವನ ವರದಕ್ಷಿಣೆ ಡಿಮ್ಯಾಂಡುಗಳು ಮುಗಿದಿರಲಿಲ್ಲ. ಅವನ ಕಾಟ ತಾಳಲಾರದೆ ಹೆಂಡತಿ ಮನೆಯವರು ಹೊಸ ಕಾರು ಕೊಡಿಸಿದ್ದರು. ಅದು 40 ಲಕ್ಷದ ಕಾರಾಗಿತ್ತು.)

ನಟ: ವಂಡರ್‌ಫುಲ್ ಸರ್. ಸರಿಯಾದ ಕಾರು. ಮನೆಯಲ್ಲಿ ಯಾವ ಫ್ರಿಜ್ಜ್ ಇದೆ. ತಗೊಂಡು ಎಷ್ಟು ದಿನ ಆಯ್ತು.

ಪತಿ ನಂಬರ್ 1: 'ಥಂಡ' ಕಂಪನಿಯ ಫ್ರಿಜ್ಜಿದೆ ಸರ್. ತಗೊಂಡು 10 ವರ್ಷ ಆಯ್ತು.

ಆ ಮಾತು ಕೇಳಿದ ಕೂಡಲೆ ನಟನಟಿಯರು ನಿಟ್ಟುಸಿರು ಬಿಟ್ಟರು.

ನಟಿ: **Oh my God!** ವನ್ ಫ್ರಿಜ್ ಇನ್ ವನ್ ಡೆಕೇಡ್?

ನಟ: ತಂತ್ರಜ್ಞಾನ ರಾಕೆಟ್ ವೇಗದಲ್ಲಿ ಬದ್ಲಾಗ್ತಿದೆ. ನಾವೂ ಅದೇ ಸ್ಪೀಡಲ್ಲಿ ಬದ್ಲಾಗ್ಬೇಕು. ಆರು ತಿಂಗಳಿಗೊಮ್ಮೆ ಬದ್ಲಾಯಿಸ್ತಿರಬೇಕು. ತಂತ್ರಜ್ಞಾನದ ಪ್ರಗತಿಯೇ ಮನುಕುಲದ ಪ್ರಗತಿಯ ಮಾಪಕ.

ನಟಿ: 'ಹಿಮ' ಕಂಪನಿಯ ಫ್ರಿಜ್ಜ್ ಇದೇ ಮಾಲಲ್ಲಿ ತಗಳ್ಳಿ. ಅದಕ್ಕೆ ಕಡಿಮೆ ಕರೆಂಟ್ ಬೇಕು. ವಿಪರೀತ ದುಡ್ಡುಳಿಯುತ್ತೆ.

ನಟ: ಕಾಸಿದ್ರೆ ಕೈಲಾಸ.

ಪತಿ ನಂಬರ್ 1: ಅದ್ಭುತ ಫಿಲಾಸಫಿ ಸರ್. **Hats off to you! Thanks Sir!**

ನಟ: ಗ್ಲೋಬಲ್ ವಾರ್ಮಿಂಗ್ ಬಗ್ಗೆ ನಿಮಗೆ ಗೊತ್ತಿರಬಹುದು. ಆದುದರಿಂದ ಫ್ರಿಜ್ಜ್ ಜೊತೆಗೆ ಇಡೀ ಮನೆಗೆ ಎ.ಸಿ. ಹಾಕಿಸಿ. ಎಲ್ಲ ಬ್ರಾಂಡೆಡ್ ಸಾಮಗ್ರಿ ಬಳಸಿ.

ಗಡಿಯಾರದ ಮೇಲೆ ಕಣ್ಣಿಟ್ಟು ನಟ ನಟಿಯರು ವೇಗವಾಗಿ ಪ್ರಶ್ನೆಗಳನ್ನು ಹಾಕತೊಡಗಿದರು. ಫ್ಯಾನು, ವಾಟರ್ ಫಿಲ್ಟರ್, ಚೇರು, ಟೇಬಲ್ಲು, ಫುಟ್ ರಗ್ಗು, ಬನಿಯನ್ನು, ಕಾಚ ಮುಂತಾದವುಗಳ ಬಗ್ಗೆ ಪ್ರಶ್ನೆ ಕೇಳಿದರು. ಹತ್ತು ಪ್ರಶ್ನೆಗಳಾದ ಮೇಲೆ ಪತಿ ನಂಬರ್ 1ನ್ನು ಬೇರೆ ಕಡೆಗೆ ಕರೆದೊಯ್ದು ಒಳಗೆ ಯಾವುದೋ ಕೋಣೆಯಲ್ಲಿದ್ದ ಆತನ ಪತ್ನಿಯನ್ನು ಕರೆತಂದು ಪ್ರಶ್ನಿಸತೊಡಗಿದರು. ಪತಿ ನಂಬರ್ 1ಗೆ ಕೇಳಿದ ಪ್ರಶ್ನೆಗಳನ್ನೇ ಪತ್ನಿ ನಂಬರ್ 1ಗೂ ಕೇಳಲಾಯಿತು.

ಪತಿರಾಯ ಆಫೀಸ್ ಬಿಟ್ಟು ಮನೆಗೆ ಬರುವುದು ರಾತ್ರಿ ಹನ್ನೆರಡರ ಮೇಲೆಯೇ ಸೈ! ಟೈಮಿಗೆ ಸರಿಯಾಗಿ ಯಾವ ಗಂಡಸೂ ನೆಟ್ಟಗೆ ಮನೆಗೆ ಬರಲ್ಲ ಎಂದು

